ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in/
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**Corporate Identity Number (CIN): U40109KA1999SGC025521**

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

---

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77 ದಿನಾಂಕ: 27.04.1978 ನ್ನು ಅಳವಡಿಸಿಕೊಂಡು ಹೊರಡಿಸಲಾದ ಮಂಡಳಿ ಆದೇಶ ಸಂಖ್ಯೆ: ಕವಿಮಂ/ಬಿ6/1302/78-79 ದಿನಾಂಕ: 16.05.1978.
2. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77 ದಿನಾಂಕ: 01.06.1978 ನ್ನು ಅಳವಡಿಸಿಕೊಂಡು ಹೊರಡಿಸಲಾದ ಮಂಡಳಿ ಆದೇಶ ಸಂಖ್ಯೆ: ಕವಿಮಂ/ಬಿ6/1302/78-79 ದಿನಾಂಕ: 07.07.1978.
3. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 21 ಎಸ್‌ಬಿಸಿ 97 ದಿನಾಂಕ: 03.02.1999 ನ್ನು ಅಳವಡಿಸಿಕೊಂಡು ಹೊರಡಿಸಲಾದ ನಿಗಮದ ಆದೇಶ ಸಂಖ್ಯೆ: ಕವಿಮಂ/ಬಿ16/3656/98-99 ದಿನಾಂಕ: 06.02.1999.
4. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 21 ಎಸ್‌ಬಿಸಿ 97 ದಿನಾಂಕ: 13.04.1999 ನ್ನು ಅಳವಡಿಸಿಕೊಂಡು ಹೊರಡಿಸಲಾದ ನಿಗಮದ ಆದೇಶ ಸಂಖ್ಯೆ: ಕವಿಮಂ/ಬಿ16/3656/98-99 ದಿನಾಂಕ: 07.05.1999.
5. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 178 ಸೇನೆನಿ 2021 ದಿನಾಂಕ: 06.11.2021.

**ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ100/3736/2019-20, ಬೆಂಗಳೂರು, ದಿನಾಂಕ:** 30 NOV 2021

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರಿಗೆ ರಾಜ್ಯ ಸಿವಿಲ್ ಸೇವಾ ಹುದ್ದೆಗಳಿಗೆ ನೀಡಲಾಗುವ ಮುಂಬಡ್ತಿಯಲ್ಲಿ ಕೆಲ ಮಿತಿಗಳಿಗೆ ಒಳಪಟ್ಟು ಅನುಕ್ರಮವಾಗಿ ಶೇಕಡ 15 ಮತ್ತು ಶೇಕಡ 3 ರ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ. ಈ ಪ್ರಾತಿನಿಧ್ಯತೆಯನ್ನು ಲೆಕ್ಕಹಾಕುವ ಸಂದರ್ಭದಲ್ಲಿ ಸ್ವಂತ ಅರ್ಹತೆಯ ಆಧಾರದ ಮೇಲೆ ನೇಮಕಗೊಂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರನ್ನು ಮುಂಬಡ್ತಿ ಸಂದರ್ಭದಲ್ಲಿ ಪರಿಗಣಿಸಬೇಕಾದ ರೀತಿಯ ಬಗ್ಗೆ ಸರ್ಕಾರವು ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಸಿಆಸುಇ 178 ಸೇನೆನಿ 2021 ದಿನಾಂಕ: 06.11.2021 ನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಗಮದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಸರ್ಕಾರದ ದಿನಾಂಕ: 06.11.2021 ರ ಸುತ್ತೋಲೆಯನ್ನು ಈ ಆದೇಶಕ್ಕೆ ಅನುಬಂಧವನ್ನಾಗಿಸಿ ಲಗತ್ತಿಸಲಾಗಿದೆ.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

**ಗೆ:**

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ನಿರ್ದೇಶಕರು (ಹಣಕಾಸು), ಬೆಸ್ಕಾಂ, ಬೆಂಗಳೂರು.
4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
5. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
6. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

https://kptcl.karnataka.gov.in for information of:

7. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
9. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಪಿಂಚಣಿದಾರರ ಸಂಘ, ಕಾವೇರಿ ಭವನ ಬೆಂಗಳೂರು.

/

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 178 ಸೇನೆನಿ 2021

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ:06.11.2021

## ಸುತ್ತೋಲೆ

**ವಿಷಯ:** ಸ್ವಂತ ಅರ್ಹತೆಯ ಆಧಾರದ ಮೇಲೆ ನೇಮಕಗೊಂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರನ್ನು ಮುಂಬಡ್ತಿ ಸಂದರ್ಭದಲ್ಲಿ ಪರಿಗಣಿಸಬೇಕಾದ ರೀತಿಯ ಬಗ್ಗೆ.

**ಉಲ್ಲೇಖ:**
1) ದಿನಾಂಕ: 27.04.1978ರ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77.
2) ದಿನಾಂಕ: 01.06.1978ರ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77.
3) ದಿನಾಂಕ: 03.02.1999ರ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 21 ಎಸ್‌ಬಿಸಿ 97.
4) ದಿನಾಂಕ: 13.04.1999ರ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 21 ಎಸ್‌ಬಿಸಿ 97.

* * *

1. ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರಿಗೆ ರಾಜ್ಯ ಸಿವಿಲ್ ಸೇವಾ ಹುದ್ದೆಗಳಿಗೆ ನೀಡಲಾಗುವ ಮುಂಬಡ್ತಿಯಲ್ಲಿ, ಕೆಲ ಮಿತಿಗಳಿಗೆ ಒಳಪಟ್ಟು, ಅನುಕ್ರಮವಾಗಿ ಶೇ. 15 ಮತ್ತು 3ರ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಉಲ್ಲೇಖ (2)ರ ಅಧಿಕೃತ ಜ್ಞಾಪನದಲ್ಲಿ ಉಲ್ಲೇಖ (1)ರ ಸರ್ಕಾರದ ಆದೇಶವನ್ನು ಜಾರಿಗೊಳಿಸುವ ಕಾರ್ಯವಿಧಾನವನ್ನು ವಿವರಿಸಲಾಗಿದೆ. ಉಲ್ಲೇಖ (3) ಮತ್ತು (4) ರ ಸರ್ಕಾರದ ಆದೇಶಗಳಲ್ಲಿ ಆಯಾ ವೃಂದದ ಕಾರ್ಯನಿರತ ವೃಂದಬಲದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರ ಪ್ರಾತಿನಿಧ್ಯತೆ ಅನುಕ್ರಮವಾಗಿ ಶೇ. 15 ಮತ್ತು 3 ಅನ್ನು ತಲುಪುವವರೆಗೆ ಈ ಮೀಸಲಾತಿ ರೋಸ್ಟರ್ ಅಳವಡಿಸಿ ಕ್ರಮವಹಿಸುವಂತೆ ತಿಳಿಸಲಾಗಿದೆ. ಈ ಪ್ರಾತಿನಿಧ್ಯತೆಯನ್ನು ಲೆಕ್ಕಹಾಕುವ ಸಂದರ್ಭದಲ್ಲಿ ಸ್ವಂತ ಅರ್ಹತೆಯ ಆಧಾರದ ಮೇಲೆ ನೇಮಕಗೊಂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರನ್ನು ಮುಂಬಡ್ತಿ ಸಂದರ್ಭದಲ್ಲಿ ಪರಿಗಣಿಸಬೇಕಾದ ರೀತಿಯ ಬಗ್ಗೆ ಈ ಕೆಳಗಿನಂತೆ ಸ್ಪಷ್ಟೀಕರಣವನ್ನು ನೀಡಲಾಗಿದೆ:

(i) ಸ್ವಂತ ಅರ್ಹತೆಯ ಆಧಾರದ ಮೇಲೆ ನೇರ ನೇಮಕಾತಿಯಲ್ಲಿ ನೇಮಕಗೊಂಡ ಎಸ್.ಸಿ., ಎಸ್.ಟಿ ಮತ್ತು ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಹಾಗೂ ಸ್ವಂತ ಅರ್ಹತೆಯ ಆಧಾರದ ಮೇಲೆ ನೇರ ನೇಮಕಾತಿ ಹೊಂದಿ ನಂತರದ ವೃಂದಕ್ಕೂ ಸ್ವಂತ ಅರ್ಹತೆಯ ಆಧಾರದ ಮೇಲೆ ಮುಂಬಡ್ತಿ ಹೊಂದಿದ ಎಸ್.ಸಿ ಮತ್ತು ಎಸ್.ಟಿ ನೌಕರರನ್ನು ಮೀಸಲಾತಿ ಕೋಟಾ ಎದುರು ಪರಿಗಣಿಸುವಂತಿಲ್ಲ. ಬದಲಿಗೆ ಅವರನ್ನು ಸಾಮಾನ್ಯ ಅಭ್ಯರ್ಥಿ/ನೌಕರರೆಂದೇ ಪರಿಗಣಿಸಬೇಕು. ಅಂದರೆ, ಅವರು ಯಾವ ವೃಂದದಲ್ಲಿ ಇರುತ್ತಾರೆಯೋ ಆ ವೃಂದದಲ್ಲಿ ಎಸ್.ಸಿ ಅಥವಾ ಎಸ್.ಟಿ ಮೀಸಲಾತಿ ಕೋಟಾ ಪ್ರಾತಿನಿಧ್ಯತೆ ಲೆಕ್ಕ ಹಾಕುವ ಸಂದರ್ಭದಲ್ಲಿ ಅವರನ್ನು ಪರಿಗಣಿಸುವಂತಿಲ್ಲ. ಆದರೆ ಉಳಿದ ಎಸ್.ಸಿ. ಅಥವಾ ಎಸ್.ಟಿ. ನೌಕರರನ್ನು ಮಾತ್ರ ಆಯಾ ಮೀಸಲಾತಿ ವರ್ಗದ ಅಡಿಯಲ್ಲಿಯೇ ಪರಿಗಣಿಸಬೇಕು. ಉದಾಹರಣೆಗೆ, ಕಿರಿಯ ಸಹಾಯಕ ವೃಂದದಿಂದ ಸಹಾಯಕ ವೃಂದಕ್ಕೆ ಮುಂಬಡ್ತಿಗೆ ಪರಿಗಣಿಸುವ ಸಂದರ್ಭದಲ್ಲಿ ಮೀಸಲಾತಿ ಪ್ರಾತಿನಿಧ್ಯ ಲೆಕ್ಕಾಚಾರ ಹಾಕುವಾಗ ಸ್ವಂತ ಅರ್ಹತೆಯ ಆಧಾರದ

ಮೇರೆಗೆ ಸಹಾಯಕ ವೃಂದಕ್ಕೆ ನೇರ ನೇಮಕಾತಿ ಹೊಂದಿದ ಎಸ್.ಸಿ./ಎಸ್.ಟಿ ನೌಕರನನ್ನು ಅಥವಾ ಸ್ವಂತ ಅರ್ಹತೆಯ ಆಧಾರದ ಮೇರೆಗೆ ಕಿರಿಯ ಸಹಾಯಕ ವೃಂದಕ್ಕೆ ನೇರ ನೇಮಕಾತಿ ಹೊಂದಿ ಸಹಾಯಕ ವೃಂದಕ್ಕೂ ಸ್ವಂತ ಅರ್ಹತೆಯ ಆಧಾರದ ಮೇರೆಗೆ ಮುಂಬಡ್ತಿ ಹೊಂದಿದ ಎಸ್.ಸಿ./ಎಸ್.ಟಿ ನೌಕರನನ್ನು ಸಹಾಯಕ ವೃಂದದಲ್ಲಿ ಸಾಮಾನ್ಯ ವರ್ಗದ ನೌಕರನೆಂದೇ ಪರಿಗಣಿಸಬೇಕಾಗುತ್ತದೆ.

(ii) ಯಾವುದೇ ಒಂದು ವೃಂದದಲ್ಲಿ ಮುಂಬಡ್ತಿಗೆ ಲಭ್ಯವಿರುವ ರಿಕ್ತ ಸ್ಥಾನಗಳು ಸಾಮಾನ್ಯ ವರ್ಗದ್ದಾಗಿದ್ದು, ಅದರ ಪೂರಕ ವೃಂದದಲ್ಲಿನ ಜೇಷ್ಠತಾ ಪಟ್ಟಿಯ ಅನುಸಾರ ಎಸ್.ಸಿ. ಮತ್ತು ಎಸ್.ಟಿ ವರ್ಗದ ನೌಕರರು ಮುಂಬಡ್ತಿಗೆ ಅರ್ಹರಾಗಿದ್ದಲ್ಲಿ ಅವರನ್ನು ಆ ಸಾಮಾನ್ಯ ವರ್ಗದ ರಿಕ್ತ ಸ್ಥಾನದ ಎದುರು ಪರಿಗಣಿಸಿ ಮುಂಬಡ್ತಿ ನೀಡಬೇಕಾಗುತ್ತದೆ. ಮುಂಬಡ್ತಿ ನೀಡಲಾಗುತ್ತಿರುವ ವೃಂದದಲ್ಲಿ ಮೀಸಲಾತಿ ಪ್ರಾತಿನಿಧ್ಯ ಭರ್ತಿಯಾಗಿದೆ ಎಂಬ ಕಾರಣಕ್ಕೆ ಅರ್ಹ ಎಸ್.ಸಿ. ಅಥವಾ ಎಸ್.ಟಿ ನೌಕರರನ್ನು ಸಾಮಾನ್ಯ ವರ್ಗದ ಮುಂಬಡ್ತಿ ರಿಕ್ತ ಸ್ಥಾನದ ಎದುರು ಪರಿಗಣಿಸದೇ ಇರುವಂತಿಲ್ಲ.

(iii) ಸಾಮಾನ್ಯ ವರ್ಗದ ಅಭ್ಯರ್ಥಿಗಳಾಗಿ ನೇರ ನೇಮಕಾತಿ ಹೊಂದಿದ ಎಸ್.ಸಿ./ಎಸ್.ಟಿ/ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳನ್ನು ಸ್ವಂತ ಅರ್ಹತೆಯ ಅಭ್ಯರ್ಥಿಗಳೆಂದು ಪರಿಗಣಿಸಬೇಕು. ಈ ರೀತಿಯಾಗಿ ಪರಿಗಣನೆಗೆ ಒಳಪಡುವ ಎಸ್.ಸಿ./ಎಸ್.ಟಿ/ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳು ಶುಲ್ಕ ವಿನಾಯಿತಿ ಹೊರತುಪಡಿಸಿ ಆಯ್ಕೆ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಬೇರೆ ಯಾವುದೇ ವಿನಾಯಿತಿ ಪಡೆದಿರಕೂಡದು. ಉದಾಹರಣೆಗೆ: ವಿದ್ಯಾರ್ಹತೆ, ಅನುಭವ, ಲಿಖಿತ ಪರೀಕ್ಷೆಯಲ್ಲಿನ ಅವಕಾಶಗಳ ಸಂಖ್ಯೆ, ಪರಿಗಣನಾ ವಲಯದಲ್ಲಿ ಸೇರ್ಪಡಿಸುವಿಕೆ ಇತ್ಯಾದಿ. ಒಂದು ವೇಳೆ ಯಾವುದೇ ಹಂತದಲ್ಲಿ ಅವರು ವಿನಾಯಿತಿಯನ್ನು ಪಡೆದಿದ್ದೇ ಆದಲ್ಲಿ, ಅಂತಹವರನ್ನು ಆಯಾ ಮೀಸಲಾತಿ ವರ್ಗದ ಹುದ್ದೆಗಳ ಎದುರು ಮಾತ್ರ ಪರಿಗಣಿಸಬೇಕು. ಈ ರೀತಿ ಸ್ವಂತ ಅರ್ಹತೆಯ ಆಧಾರದ ಮೇಲೆ ಆಯ್ಕೆಗೊಂಡ ಅಭ್ಯರ್ಥಿಗಳನ್ನು ಆಯ್ಕೆ ಪ್ರಾಧಿಕಾರವು ಆಯ್ಕೆ ಪಟ್ಟಿಯಲ್ಲಿ ಸ್ಪಷ್ಟವಾಗಿ ಗುರುತಿಸುವುದು.

(iv) ಎಸ್.ಸಿ./ ಎಸ್.ಟಿ ಅಭ್ಯರ್ಥಿ/ ನೌಕರರು ಸ್ವಂತ ಅರ್ಹತೆಯ ಆಧಾರದ ಮೇಲೆ ನೇರ ನೇಮಕಾತಿ ಅಥವಾ ಮುಂಬಡ್ತಿ ಹೊಂದಿದ್ದರೂ ಸಹ ನಂತರದ ವೃಂದಕ್ಕೆ ಅವರನ್ನು ಮುಂಬಡ್ತಿಗೆ ಪರಿಗಣಿಸುವ ಸಂದರ್ಭದಲ್ಲಿ, ಅಂತಹ ಅವಕಾಶವಿದ್ದಲ್ಲಿ, ಅವರು ಮೀಸಲಾತಿ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಉದಾಹರಣೆಗೆ: ಕರ್ನಾಟಕ ಸರ್ಕಾರ ಸಚಿವಾಲಯದ ಸಹಾಯಕ ವೃಂದದಲ್ಲಿ ಸ್ವಂತ ಅರ್ಹತೆಯ ಆಧಾರದ ಮೇಲೆ ಆಯ್ಕೆಗೊಂಡು ನೇಮಕಾತಿ ಹೊಂದಿದ ಎಸ್.ಸಿ./ಎಸ್.ಟಿ ನೌಕರನು ಹಿರಿಯ ಸಹಾಯಕ ವೃಂದಕ್ಕೆ ಮುಂಬಡ್ತಿ ಹೊಂದುವ ಸಂದರ್ಭದಲ್ಲಿಆಯಾ ಮೀಸಲಾತಿ ವರ್ಗದ ಮೀಸಲಾತಿ ಪಡೆಯಲು ಅರ್ಹನಾಗಿರುತ್ತಾನೆ. ಮುಂದುವರೆದು, ಮೀಸಲಾತಿ ಆಧಾರದ ಮೇಲೆ ಆ ನೌಕರನು ಹಿರಿಯ ಸಹಾಯಕನಾಗಿ ಮುಂಬಡ್ತಿ

ಹೊಂದಿದಲ್ಲಿ ಆ ಬಳಿಕ ಆತನನ್ನು ಸಾಮಾನ್ಯ ವರ್ಗದ ನೌಕರನೆಂದು ಪರಿಗಣಿಸದೇ, ಎಸ್.ಸಿ./ಎಸ್.ಟಿ ನೌಕರನೆಂದು ಪರಿಗಣಿಸಬೇಕಾಗುತ್ತದೆ.

(v) ಉಲ್ಲೇಖ(2)ರ ಅಧಿಕೃತ ಜ್ಞಾಪನದ ಅನುಸಾರ ಕ್ರಮವಹಿಸಿ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಪ್ರಾತಿನಿಧ್ಯತೆ ಕೊರತೆ ಇದ್ದು, ಮೀಸಲಾತಿ ರೋಸ್ಟರ್ ನಿರ್ವಹಿಸುವಾಗ ಆ ಸಂದರ್ಭದಲ್ಲಿ ಎಷ್ಟು ಹುದ್ದೆಗಳಿಗೆ ಮುಂಬಡ್ತಿ ನೀಡಲಾಗುತ್ತಿದೆಯೋ ಅಷ್ಟೂ ಹುದ್ದೆಗಳಿಗೆ ರೋಸ್ಟರ್ ಅನ್ವಯಿಸಬೇಕು. ಪ್ರಾತಿನಿಧ್ಯತೆ ಪೂರ್ಣಗೊಂಡಿತು ಎಂಬ ಕಾರಣಕ್ಕೆ ಮಧ್ಯದಲ್ಲಿಯೇ ರೋಸ್ಟರ್ ನಿರ್ವಹಣೆಯನ್ನು ನಿಲ್ಲಿಸುವಂತಿಲ್ಲ.

ಉದಾಹರಣೆಗೆ, ವೃಂದವೊಂದರಲ್ಲಿ ಎಸ್.ಸಿ. ನೌಕರರ ಪ್ರಾತಿನಿಧ್ಯತೆ ಶೇ.14 ಇರುತ್ತದೆ. ಇನ್ನು ಇಬ್ಬರು ಎಸ್.ಸಿ. ನೌಕರರಿಗೆ ಮುಂಬಡ್ತಿ ನೀಡಿದರೆ ಆ ಪ್ರಾತಿನಿಧ್ಯತೆ ಶೇ.15 ರಷ್ಟಾಗುತ್ತದೆ. ಆದರೆ ಪ್ರಸ್ತುತ 30 ನೌಕರರಿಗೆ ಪೂರಕ ವೃಂದದಿಂದ ಮುಂಬಡ್ತಿ ನೀಡಲಾಗುತ್ತಿದೆ. ಆಗ ಕೇವಲ ಇಬ್ಬರು ಎಸ್.ಸಿ. ನೌಕರರನ್ನು ಮಾತ್ರ ಮೀಸಲಾತಿ ರೋಸ್ಟರ್ ಅಡಿ ಪರಿಗಣಿಸುವಂತಿಲ್ಲ. ಬದಲಿಗೆ 30 ಹುದ್ದೆಗಳಲ್ಲಿ ಮೀಸಲಾತಿ ರೋಸ್ಟರ್ ಅನುಸಾರ ಎಸ್.ಸಿ. ನೌಕರರಿಗೆ ಎಷ್ಟು ಹುದ್ದೆಗಳು ಲಭ್ಯವಾಗುತ್ತವೆಯೋ (ಸಾಮಾನ್ಯವಾಗಿ 5 ಹುದ್ದೆಗಳು) ಅಷ್ಟೂ ಹುದ್ದೆಗಳಿಗೆ ಮುಂಬಡ್ತಿಗೆ ಎಸ್.ಸಿ. ನೌಕರರನ್ನು ಪರಿಗಣಿಸಬೇಕು.

2. ಈ ಸುತ್ತೋಲೆಯು ಹೊರಡಿಸಿದ ದಿನಾಂಕದಿಂದ ಜಾರಿಗೆ ಬರಲಿದ್ದು, ಪೂರ್ವಾನ್ವಯ ಪರಿಣಾಮ ಹೊಂದಿರುವುದಿಲ್ಲವೆಂದು ಈ ಮೂಲಕ ಸೂಚಿಸಲಾಗಿದೆ.

(ಮಾನ್ಯ ಮುಖ್ಯ ಮಂತ್ರಿಯವರಿಂದ

ಅನುಮೋದಿತ)

Hemalatha P

(ಹೇಮಲತ.ಪಿ)
ಸರ್ಕಾರದ ಕಾರ್ಯದರ್ಶಿಯವರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಇದರ 50 ಪ್ರತಿಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸೇವಾ ನಿಯಮಗಳು-ಎ, ಕೊಠಡಿ ಸಂಖ್ಯೆ-31, ವಿಧಾನಸೌಧ, ನೆಲಮಹಡಿ ಇಲ್ಲಿಗೆ ಕಳುಹಿಸುವಂತೆ ಕೋರಲಾಗಿದೆ.
ಇವರಿಗೆ:

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ಎಸ್ಎ), (ಇ &ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು,
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರು
5. ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು
6. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು,
7. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಯವರು
8. ಪ್ರಧಾನ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು.
9. *ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ ಪರಿಷತ್ತು, ಬೆಂಗಳೂರು